ಬೆಂಗಳೂರಿನ ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ ಅನುಮತಿ

೩೮೯. ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೆಂಗಳೂರು ನಗರದಲ್ಲಿ ಒಟ್ಟು ಎಷ್ಟು ಶಿಕ್ಷಣ ಸಂಸ್ಥೆಗಳಿಂದ ಇಂಗ್ಲೀಷ್ ಮೀಡಿಯಂ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ತೆರೆಯಲು ಸರಕಾರಕ್ಕೆ ಅರ್ಜಿಗಳು ಬಂದಿವೆ (ಎರಡನ್ನೂ ಬೇರೆ ಬೇರೆಯಾಗಿ ನೀಡುವುದು);

ಆ) ಇಂಗ್ಲೀಷ್ ಮಿಡಿಯಂ ಶಾಲೆಗಳನ್ನು ಪ್ರಾರಂಭಿಸಲು ಅರ್ಹ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನೀಡಲು ಸರಕಾರಕ್ಕೆ ಇರುವ ತೊಂದರೆಗಳೇನು, ಹಾಗೂ ಇಂಗ್ಲೀಷ್ ಮಿಡಿಯಂ ಶಾಲೆಗಳಿಗೆ ಅನುಮತಿ ನೀಡಲು ಸರಕಾರವು ಏನಾದರೂ ಮಾರ್ಗಸೂಚಿಗಳನ್ನು ಹಾಕಿ ಕೊಂಡಿದೆಯೇ?

ಇ) ಅರ್ಹವಾದ ಎಲ್ಲಾ ರೀತಿಯ ಷರತ್ತುಗಳನ್ನೂ ಪೂರೈಸುವ ಹಾಗೂ ಕನ್ನಡ ಮಾಧ್ಯಮ ಶಾಲೆಗಳನ್ನು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ಇಂಗ್ಲೀಷ್ ಮಿಡಿಯಂ ಶಾಲೆಗಳನ್ನು ಆರಂಭಿಸಲು ಅನುಮತಿ ನೀಡಲು ಸರಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಪ್ರಾಥಮಿಕ ಶಾಲೆಗಳು — ೧೭೭
ಪ್ರೌಢ ಶಾಲೆಗಳು — ೧೪೪

ಆ) ಪ್ರಾಥಮಿಕ ಶಾಲೆಗಳ ಅನುದಾನ ಸಂಹಿತೆಯಲ್ಲಿ ಸೂಚಿಸಿರುವಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಅನುದಾನ ಸಂಹಿತೆಯ ಪ್ರಕಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ನಗರದ ಬನಶಂಕರಿ ಒಂದು, ಎರಡು ಮತ್ತು ಮೂರನೆಯ ಘಟ್ಟದಲ್ಲಿ ಇರತಕ್ಕ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ.

೩೦೮. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಶಿಕ್ಷಣ ಯುವಜನ ಸೇವೆ, ಕ್ರೀಡೆ ಕನ್ನಡ, ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಬೆಂಗಳೂರು ನಗರದ ಬನಶಂಕರಿ ಒಂದನೇ ಘಟ್ಟ, ಎರಡನೇ ಘಟ್ಟ, ಮೂರನೇ ಘಟ್ಟಗಳಲ್ಲಿ ಇರತಕ್ಕ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು. ಅವು ಯಾವುವು.

ಆ) ಮೇಲ್ಕಂಡ ಬಡಾವಣೆಗಳಲ್ಲಿ ಅನುಮತಿ ಪಡೆದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು ಅವು ಯಾವುವು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು).—

ಅ) ಸರಕಾರಿ ಪ್ರಾಥಮಿಕ ಶಾಲೆಗಳು — ೬
ಸರಕಾರಿ ಪ್ರೌಢ ಶಾಲೆಗಳು — ಇಲ್ಲ
ವಿವರಗಳಿಗೆ ಅನುಬಂಧ ನೋಡುವುದು.

ಆ) ಪ್ರಾಥಮಿಕ ಶಾಲೆಗಳು — ೨೦
ಪ್ರೌಢ ಶಾಲೆಗಳು — ೫
ವಿವರಗಳಿಗೆ ಅನುಬಂಧ ನೋಡುವುದು.

ಅನುಬಂಧ

೧. ಪ್ರಾಥಮಿಕ ಶಾಲೆಗಳು.—

	ಒಂದನೆಯ ಘಟ್ಟ	ಎರಡನೆಯ ಘಟ್ಟ	ಮೂರನೇ ಘಟ್ಟ
ಒಂದನೆಯ ಹಂತ :	೧) ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಶ್ರೀನಗರ		
	೨) ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ, ಆವಲಹಳ್ಳಿ		
೨ನೇ ಹಂತ:	೧) ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಪಾಠಶಾಲೆ, ಕರೀಸಂದ್ರ		
	೨) ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಪಾಠಶಾಲೆ, ಕರೀಸಂದ್ರ		
೩ನೇ ಹಂತ:	೧) ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ, ಕತ್ತರಿಗುಪ್ಪೆ		
	೨) ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ, ಇಟ್ಟಮಡು.		

2. ಸರ್ಕಾರಿ ಪ್ರೌಢ ಶಾಲೆಗಳು:

ಬೆಂಗಳೂರು ನಗರದ ಬನಶಂಕರಿ ೧ನೇ ಮತ್ತು ೨ನೇ ಮತ್ತು ೩ನೇ ಹಂತಗಳಲ್ಲಿ ಸರ್ಕಾರಿ ಪ್ರೌಢ ಶಾಲೆಗಳು ಇರುವುದಿಲ್ಲ.

ಪ್ರಾಥಮಿಕ ಶಾಲೆಗಳು: ಅನುದಾನ ರಹಿತ ಪ್ರಾಥಮಿಕ ಶಾಲೆಗಳು : ೬.

೧) ಅರಬಿಂದೋ ಮೆಮೋರಿಯಲ್ ಆಂಗ್ಲ ಪ್ರಾಥಮಿಕ, ಪಾಠಶಾಲೆ ಬನಶಂಕರಿ ೨ನೇ ಹಂತ
೨) ಪ್ರತಿಭಾ ಬಾಲಮಂದಿರ ಆಂಗ್ಲ ಶಾಲೆ, ಬನಶಂಕರಿ ೨ನೇ ಹಂತ
೩) ವಿಶ್ವವಿದ್ಯಾಸದನ ಆಂಗ್ಲ ಶಾಲೆ, ಬನಶಂಕರಿ ೨ನೇ ಹಂತ
೪) ಮೆಕಾಲೆ ಆಂಗ್ಲ ಪ್ರಾಥಮಿಕ ಶಾಲೆ, ಬನಶಂಕರಿ ೨ನೇ ಹಂತ
೫) ಸೆಂಟ್ ಥಾಮಸ್ ಆಂಗ್ಲ ಪ್ರಾಥಮಿಕ ಶಾಲೆ, ಬನಶಂಕರಿ ೨ನೇ ಹಂತ
೬) ಲಿಟ್ಲ್ ಫ್ಲವರ್ ಆಂಗ್ಲ ಶಾಲೆ, ಬನಶಂಕರಿ ೩ನೇ ಹಂತ

ಅನುದಾನ ಸಹಿತ ಪ್ರಾಥಮಿಕ ಶಾಲೆಗಳು : ೧೪ : ಬನಶಂಕರಿ ೧ನೇ ಹಂತ

೧) ಬಸವೇಶ್ವರ ವಿದ್ಯಾಲಯ, ಹನುಮಂತನಗರ, ಬನಶಂಕರಿ ೧ ನೇ ಹಂತ
೨) ಭಾರತಮಾತಾ ವಿದ್ಯಾಮಂದಿರ ಹಿರಿಯ ಪ್ರಾಥಮಿಕ ಪಾಠಶಾಲೆ, ಹನುಮಂತನಗರ
೩) ಗೋಕಾಲಂ ಗಾರ್ಡನ್ ಹಿರಿಯ ಪ್ರಾಥಮಿಕ ಪಾಠ ಶಾಲೆ ಬನಶಂಕರಿ ೧ನೇ ಹಂತ
೪) ಕುಮಾರಸ್ವಾಮಿ ವಿದ್ಯಾ ಮಂದಿರ ಹನುಮಂತನಗರ, ಬನಶಂಕರಿ ೧ನೇ ಹಂತ
೫) ರಾಧಾಕೃಷ್ಣ ವಿದ್ಯಾ ಮಂದಿರ ಅಶೋಕನಗರ, ಬನಶಂಕರಿ ೧ನೇ ಹಂತ
೬) ರಾಜೇಶ್ವರಿ ವಿದ್ಯಾಮಂದಿರ ಹನುಮಂತನಗರ, ಬನಶಂಕರಿ ೧ನೇ ಹಂತ
೭) ಶಾಂತಿನಿಕೇತನ ಪ್ರಾಥಮಿಕ ಶಾಲೆ, ಆವಲಹಳ್ಳಿ, ಬನಶಂಕರಿ ೧ನೇ ಹಂತ
೮) ವೆಂಕಟೇಶ್ವರ ವಿದ್ಯಾಮಂದಿರ ಹಿರಿಯ ಪ್ರಾಥಮಿಕ ಶಾಲೆ, ಬನಶಂಕರಿ ೧ನೇ ಹಂತ

ಬನಶಂಕರಿ ೨ನೇ ಹಂತ:

೧) ನಿರ್ಮಲ ವಿದ್ಯಾಸಂಸ್ಥೆ ಶ್ರೀನಿವಾಸನಗರ, ಬನಶಂಕರಿ ೨ನೇ ಹಂತ
೨) ಸಂಜ್ಞಾನ ವಿದ್ಯಾಸಂಸ್ಥೆ ಕನ್ನಡ ಪ್ರಾಥಮಿಕ ಶಾಲೆ, ಬನಶಂಕರಿ ೨ನೇ ಹಂತ
೩) ಸುಜ್ಞಾನ ವಿದ್ಯಾಸಂಸ್ಥೆ ತಮಿಳು ಪ್ರಾಥಮಿಕ ಪಾಠಶಾಲೆ ಬನಶಂಕರಿ ೨ನೇ ಹಂತ
೪) ಸಂಗಮೇಶ್ವರ ಪ್ರಾಥಮಿಕ ಶಾಲೆ, ಕತ್ತರಿಗುಪ್ಪೆ, ಬನಶಂಕರಿ ೨ನೇ ಹಂತ
೫) ಶ್ರೀನಿವಾಸ ಕನ್ನಡ ಪ್ರಾಥಮಿಕ ಶಾಲೆ, ಬನಶಂಕರಿ ೨ನೇ ಹಂತ
೬) ವಿನಾಯಕ ಪ್ರಾಥಮಿಕ ಶಾಲೆ ಶ್ರೀನಿವಾಸನಗರ, ಬನಶಂಕರಿ ೨ನೇ ಹಂತ

ಬನಶಂಕರಿ ೩ನೇ ಹಂತದಲ್ಲಿ ಶಾಲೆಗಳಿರುವುದಿಲ್ಲ.

ಖಾಸಗೀ ಪ್ರೌಢ ಶಾಲೆಗಳಂ

೧) ಬನಶಂಕರಿ ೧ ನೇ ಹಂತದಲ್ಲಿ ಪ್ರೌಢಶಾಲೆಗಳಿರುವುದಿಲ್ಲ.

೨) ಬನಶಂಕರಿ ೨ ನೇ ಹಂತ:—

೧) ಭಾಗೀರಥಿಬಾಯಿ ನಾರಾಯಣರಾವ್ ಮಾನ್ಕೆಪ್ರೌಢಶಾಲೆ

೨) ಶ್ರೀ ಅರಬಿಂಧೋ ಮೆಮೋರಿಯಲ್ ಪ್ರೌಢಶಾಲೆ

೩) ರಾಜೇಶ್ವರಿ ವಿದ್ಯಾಮಂದಿರ ಪ್ರೌಢಶಾಲೆ

೪) ವಿದ್ಯಾ ಪ್ರೌಢ ಶಾಲೆ

೫) ವೆಂಕಟೇಶ್ವರ ವಿದ್ಯಾ ಸಂಸ್ಥೆ

೩) ಬನಶಂಕರಿ ೩ ನೇ ಹಂತದಲ್ಲಿ ಪ್ರೌಢ ಶಾಲೆಗಳಿರುವುದಿಲ್ಲ.

ಕೋಲಾರ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಕರ ಕೊರತೆ

೧೨೩೭. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕೋಲಾರ ಜಿಲ್ಲೆಯಲ್ಲಿ ನಗರ ಪ್ರದೇಶಗಳಿಗಿಂತ ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಕರ ಕೊರತೆ ಇರುವುದು ನಿಜವೇ?

ಆ) ಹಾಗಿದ್ದಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಶಿಕ್ಷಕರುಗಳನ್ನು ನೇಮಿಸಲು ಸರ್ಕಾರವು ಯಾವ ಕ್ರಮಗಳನ್ನು ತೆಗೆದುಕೊಳ್ಳುವುದು?

ಇ) ಬೇತಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಬರುವ ಎಷ್ಟು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ?

ಈ) ಶಿಕ್ಷಕರನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್(ಶಿಕ್ಷಣ, ಯುವಜನ, ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ನಿಜ.

ಆ) ಖಾಲಿ ಇರುವ ಹುದ್ದೆಗಳನ್ನು ಆರ್ಥಿಕ ಮಿತವ್ಯಯ ಸಡಿಲಿಕೆಯ ಆದೇಶ ಹೊರಡಿಸಿದ ನಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ೧೧೨ (ಏಕೋಪಾಧ್ಯಾಯ ಶಾಲೆಗಳಲ್ಲಿ)

ಈ) ಈಗಾಗಲೇ ೧೧೨ ಶಿಕ್ಷಕರ ಹುದ್ದೆಗಳನ್ನು ಕಪ್ಪು ಪಹಲಗೆ ಯೋಜನೆಯಡಿಯಲ್ಲಿ ಬಂಗಾರಪೇಟೆ ತಾಲ್ಲೂಕಿನ ಏಕೋಪಾಧ್ಯಾಯ ಶಾಲೆಗಳಿಗೆ ಮಂಜೂರು ಮಾಡಲಾಗಿದೆ. ಇವುಗಳನ್ನು ಜಿಲ್ಲಾ ನೇಮಕಾತಿ ಸಮಿತಿಯ ಮೂಲಕ ತುಂಬಲಾಗುವುದು.

ಮುಲ್ಕಿ ಪುರಸಭೆಗೆ ನೀರು ಪೂರೈಕೆ

೧೧೬೪. ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಿಬಿದ್ರೆ).— ಮಾನ್ಯ ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(೧) ಮುಲ್ಕಿಯಲ್ಲಿ ಕುಡಿಯುವ ನೀರಿನ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(೨) ನೀರಿನ ಬಗ್ಗೆ ಪುರಸಭೆಯವರು ತಯಾರಿಸಿದ ಯೋಜನೆಗೆ ಸರ್ಕಾರವು ಯಾವ ರೀತಿಯ ಸಹಾಯ ಮಾಡುವುದು ?

(೩) ನಂದಿಕೂರಿನಲ್ಲಿ ಉಷ್ಣವಿದ್ಯುತ್ ಸ್ಥಾವರಕ್ಕೆ ಕಟ್ಟಲಾಗುವ ಮುಲ್ಕಿ ಅಣೆಕಟ್ಟಿನ ನೀರನ್ನು ಮುಲ್ಕಿಯ ಜನರಿಗೆ ಕುಡಿಯಲು ಒದಗಿಸಲಾಗುವುದೇ ?